Date :01-06-2016

quickmarketreports.com

# ತೆರಿಗೆ ನಿಯಮ ಜೂಸ್ತೂರಿಂದ

**ಜೂನ್ 1ರಿಂದ ಕೆಲವು ತೆರಿಗೆಗಳು ಮತ್ತು ನಿಯಮಗಳು ಜಾರಿಗೆ ಬರುತ್ತಿವೆ. ಇದರಿಂದ ನಿಮ್ಮ ಪರ್ಸಿನ ಮೇಲೆ ಆಗುವ ಪರಿಣಾಮಗಳೇನು? ಒಂದು ಕ್ವಿಕ್ ರೌಂಡಪ್.**

**1. ಸೇವಾ ತೆರಿಗೆ :** ಹಣಕಾಸು ಸಚಿವ ಅರುಣ್ ಜೇಟ್ಲಿ ಅವರು ಬಜೆಟ್‌ನಲ್ಲಿ ಪ್ರಕಟಿಸಿದ್ದ ಶೇ0.5ರ ಕೃಷಿ ಕಲ್ಯಾಣ ಮೇಲ್ತೆರಿಗೆ (ಸೆಸ್) ಜಾರಿಗೆ ಬರುತ್ತಿದ್ದು, ಎಲ್ಲ ಸೇವೆಗಳಿಗೆ ಇದು ಅನ್ವಯವಾಗಲಿದೆ. ಅಂದರೆ ಟ್ರಾವೆಲ್, ಇಂಟರ್‌ನೆಟ್, ಹೋಟೆಲ್ ಬಿಲ್, ಫೋನ್ ಬಿಲ್ ಸೇರಿದಂತೆ ಎಲ್ಲಾ ಸೇವೆಗಳಿಗೂ ಇದು ಅನ್ವಯ. ಇದು ಸೇರಿದಂತೆ ಸೇವಾ ತೆರಿಗೆಯು ಶೇ.14.5ರಿಂದ ಶೇ15ನ್ನು ಮುಟ್ಟಲಿದೆ. ಅಂದರೆ ಸಾವಿರ ರೂಪಾಯಿ ಬಿಲ್‌ನಲ್ಲಿ ಈ ಮೊದಲು 145 ರೂಪಾಯಿ ತೆರಿಗೆ ಕಡಿತವಾಗುತ್ತಿತ್ತು. ಅದಕ್ಕೆ ಇನ್ನುಂದೆ 5 ರೂಪಾಯಿ ಸೇರಿಕೊಳ್ಳಲಿದೆ.

**2. ಐಶಾರಾಮಿ ತೆರಿಗೆ :** 10 ಲಕ್ಷ ರೂ. ಮತ್ತು ಅದಕ್ಕೂ ಹೆಚ್ಚಿನ ಮೌಲ್ಯದ ಕಾರ್‌ಗಳನ್ನು ಖರೀದಿಸುವವರು ಶೇ1ರಷ್ಟು ತೆರಿಗೆಯನ್ನು ಪಾವತಿ ಮಾಡಬೇಕಾಗುತ್ತದೆ. ಮಾರಾಟಗಾರರಿಂದ ಈ ತೆರೆಗೆಯನ್ನು ಸರಕಾರ ಪಡೆದರೂ, ಅದರ ಹೊರೆಯನ್ನು ಮಾರಾಟಗಾರರು ಗ್ರಾಹಕರಿಗೆ ವರ್ಗಾಯಿಸುವುದು ಖಚಿತ.

**3. ತೆರಿಗೆ ವಿವಾದಗಳ ಇತ್ಯರ್ಥ ಯೋಜನೆ :** ಸುದೀರ್ಘ ಕಾಲದಿಂದ ಕೋರ್ಟ್‌ಗಳು, ನ್ಯಾಯಮಂಡಳಿಗಳಲ್ಲಿ ನನೆಗುದಿಗೆ ಬಿದ್ದಿರುವ ತೆರೆಗೆ ವಿವಾದಗಳನ್ನು ಇತ್ಯರ್ಥಗೊಳಿಸುವ ಸರಕಾರದ ಯೋಜನೆಯು ಜೂನ್‌ನಿಂದ ಜಾರಿಗೆ ಬರಲಿದೆ. ತೆರಿಗೆ ನಿಯಮಗಳಿಗೆ ಬದಲಾವಣೆ ತಂದು ಪ್ರಕರಣಗಳ ಇತ್ಯರ್ಥಕ್ಕೆ ಇದು ಪೂರಕವಾಗಲಿದೆ.

**4. ಕಪ್ಪು ಹಣ ಘೋಷಣೆಗೆ ಅವಕಾಶ :** ಕಾಳಧನಿಕರು ತಮ್ಮಲ್ಲಿನ ಕಪ್ಪು ಹಣ ಪ್ರಕಟಿಸಿ ಶಿಕ್ಷೆಯಿಂದ ಪಾರಾಗಲು ಪಲೂರಕವಾಗುವಂತೆ ಏಕಗವಾಕ್ಷಿ ಯೋಜನೆಯನ್ನು ಜೂನ್ 1ರಿಂದ ಕೇಂದ್ರ ಸರಕಾರವು ಜಾರಿಗೆ ತರಲಿದೆ. ಮೂರು ತಿಂಗಳ ಗಡುವಿನೊಳಗೆ ತಮ್ಮ ಕಪ್ಪು ಹಣವನ್ನು ಘೋಷಿಸಿದರೆ, ಶೇ40ರಷ್ಟು ತೆರಿಗೆ ಪಾವತಿಸಿ ಶಿಕ್ಷೆಯಿಂದ ಪಾರಾಗಬಹುದು.

**2 ಲಕ್ಷ ರೂ. ಮೀರಿದ ಸರಕು ಸೇವೆಗಳಿಗೆ ಶೇ1 ತೆರಿಗೆ :** ಚಿನ್ನಾಭರಣ ಹೊರತುಪಡಿಸಿದಂತೆ ಸರಕು ಮತ್ತು ಸೇವೆಗಳಿಗಾಗಿ ಪಾವತಿಸುವ ಹಣವು 2 ಲಕ್ಷ ರೂ.ಗಳಿಗೂ ಅಧಿಕವಾಗಿದ್ದರೆ ಶೇ 1ರಷ್ಟು ತೆರಿಗೆಯನ್ನು (ಟಿಸಿಎಸ್) ಜೂ.1ರಿಂದ ಗ್ರಾಹಕರು ಪಾವತಿಸಬೇಕಾಗುತ್ತದೆ. ಕೇಂದ್ರ ಬಜೆಟ್‌ನಲ್ಲಿ ಜೇಟ್ಲಿ ಪ್ರಸ್ತಾಪಿಸಿದ್ದ ಟಿಸಿಎಸ್‌ಗಳು ಜೂನ್ ಆರಂಭದಿಂದಲೇ ಅನ್ವಯವಾಗಲಿದೆ. ಜೊತೆಗೆ, ಸೆಕ್ಯೂರಿಟಿ ವಹಿವಾಟು ತೆರಿಗೆಯು (ಎಸ್‌ಟಿಟಿ) 0.017 ಪರ್ಸೆಂಟ್‌ನಿಂದ 0.05ಕ್ಕೆ ಬುಧವಾರದಿಂದಲೇ ಹೆಚ್ಚಳವಾಗುತ್ತದೆ.